ತಾವು ಕೇಳಿರುವಂಥಾದ್ದನ್ನು ಹಾಕುತ್ತೇನೆ. ಅಪ್ಪರ್ ತುಂಗಾಕ್ಕೆ ಎಷ್ಟು ಬೇಕು, ತುಂಗಾ ಲಿಫ್ಟ್ ಇರಿಗೇಷನ್‌ಗೆ ಎಷ್ಟು ಬೇಕು. ತುಂಗ ಡೈವರ್ಷನ್‌ಗೆ ಎಷ್ಟು ಬೇಕು? ನಿಮ್ಮ ತಾಲ್ಲೂಕಿಗೆ ಎಷ್ಟು ಕೊಡುವುದಕ್ಕೆ ಸಾಧ್ಯವಾಗುತ್ತದೆ? ಎನ್ನುವಂಥಾದ್ದು ಈ ನಾಲ್ಕು ಪಾಯಂಟ್‌ನ್ನು ವಾಟರ್ ರಿಸೋರ್ಸಸ್ ಡೆವಲಪ್‌ಮೆಂಟ್ ಆರ್ಗನೈಜೇಷನ್‌ರವರಿಗೆ ರೇಫರ್ ಮಾಡಿ ಇಬ್ಬರು ಇಂಜಿನೀಯರ್ಸ್‌ಗಳನ್ನು ಕಳುಹಿಸಿ ಎಕ್ಸಾಮಿನ್ ಮಾಡಿಸಿ ಅದರ ಸಾಧ್ಯತೆಯ ಬಗ್ಗೆ ಪರಿಶೀಲನೆ ಮಾಡಿಸುತ್ತೇನೆ.

ಶ್ರೀ ಹೆಚ್. ಎನ್. ನಂಜೇಗೌಡ :- ಮಾನ್ಯ ಅಧ್ಯಕ್ಷರೆ, ನಾನು ಈ ವಿಚಾರಕ್ಕೆ ಸಂಬಂಧಪಟ್ಟಹಾಗೆ ಒಂದು ಪಾಯಿಂಟ್ ಕೇಳುತ್ತೇನೆ. ಮುಳುಗಡೆಯಾಗುವಂತಹ ಪ್ರದೇಶಗಳು ಅವುಗಳಲ್ಲಿ ಕೆಲವರ ಜಮೀನು ಅರ್ಧ ಮುಳುಗಡೆಯಾಗುತ್ತದೆ. ಕೆಲವರು ಅರ್ಧ ಉಳಿಯುತ್ತದೆ. ಹಿಂದೆ 1973 ನೇ ಇಸವಿಯಲ್ಲಿ ಮುಳುಗಡೆಯಾದಂತಹ ಅಚ್ಚುಕಟ್ಟು ಪ್ರದೇಶಗಳಲ್ಲಿ ಇರುವಂತಹ ಲಿಫ್ಟ್ ಆಗುವುದು ರೀಜನರೇಷನ್‌ಗೆ ಹೋಗುತ್ತದೆ. ಲಾಸ್ ಏನು ಆಗುವುದಿಲ್ಲ. ಈ ಒಂದು ಟಿ.ಎಂ.ಸಿ. ನೀರನ್ನು ನೀವು ಅಲ್ಲಿಗೆ ಕೊಡುತ್ತೀರೆಂದು ಇಟ್ಟುಕೊಳ್ಳಿ, ಅದರಲ್ಲಿ ಅರ್ಧವೂ ಖರ್ಚಾಗುವುದಿಲ್ಲ. ಎಲ್ಲಾ ಉಳಿದು ರಿ ಜನರೇಟ್ ಆಗಿ ಎಲ್ಲಾ ಅಲ್ಲಿಗೆ ಬರುತ್ತದೆ. ನೀವು ವಾಟರ್ ಸ್ಪ್ರೆಡ್ ಏರಿಯಾದಲ್ಲಿ ಕೊಡುವಂಥಾದ್ದು ಕಿಂಚಿತ್ತು ಅಷ್ಟೇ, it need not go to the entire account. As a policy matter you have to take decision wherever submersible area is there. ಒಂದು ಹಳ್ಳಿಯಲ್ಲಿ ಅರ್ಧ ಮುಳುಗಡೆ ಯಾಗುತ್ತದೆ, ಆಗ ಅವರಿಗೆ ಕೊಡಬೇಕಾದಂಥದ್ದನ್ನು ಕೊಡಬೇಕಾಗುತ್ತದೆ.

ಶ್ರೀ ಕೆ. ಎನ್. ನಾಗೇಗೌಡ :- ನಿಮ್ಮ ಪ್ರಪೋಜಲ್ ಬಹಳ ಚೆನ್ನಾಗಿ ಇದೆ. ಇದನ್ನು ಆಲಮಟ್ಟಿ ಪ್ರಪೋಜಲ್‌ಗೆ ಅಡಾಪ್ಟ್ ಮಾಡಿ 5 ಲೀಫ್ಟ್ ಇರೀಗೇಷನ್‌ನ್ನೂ ನಾವು ಕೈಗೆ ಎತ್ತಿಕೊಂಡಿದ್ದೇವೆ. ಅದೇ ರೀತಿ ಎಲ್ಲೆಲ್ಲಿ ಸಬ್‌ಮರ್ಜ್ ಆಗುವಂತಹ ಏರಿಯಾ ಇದೆ ಅಲ್ಲಗೆ ತಾವು ಹೇಳಿದ ಹಾಗೆ ರೀಜನರೇಟ್ ಆಗುತ್ತದೆ. ನಾವು ಎಷ್ಟು ನೀರು ಕೊಡುತ್ತೇವೆ ಅಷ್ಟು ಉಪಯೋಗ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಇದನ್ನು ನಾವು ಡಬ್ಲ್ಯೂ.ಆರ್.ಡಿ.ಗೆ ರೇಫರ್ ಮಾಡಿ ಎಕ್ಸಾಮಿನ್ ಮಾಡಿಸುತ್ತೇವೆ.

(ಊ) ಫೋನ್ ಕದ್ದಾಲಿಕೆ ನಡೆದಿದೆ ಎನ್ನುವ ವಿಷಯ ಕುರಿತು.

+ **ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್) :-** ಮಾನ್ಯ ಅಧ್ಯಕ್ಷರೇ, ಇವತ್ತು ಕೊನೆಗೆ ನಾನು ಈ ಪ್ರಶ್ನೆಯನ್ನು ಪ್ರಸ್ತಾಪ ಮಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಏಕೆಂದರೆ ಇದು ಸಾರ್ವಜನಿಕ ಮಹತ್ವವಾದಂತಹ ಪ್ರಶ್ನೆ ಕೂಡ ಆಗಿದೆ. ಮಾನ್ಯ ಮುಖ್ಯಮಂತ್ರಿಯವರು ಅಥವಾ ಗೃಹ ಮಂತ್ರಿಗಳು ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಮಾನ್ಯ ಉಪ ಮುಖ್ಯಮಂತ್ರಿಯವರು ಇದ್ದಾರೆ, ಬಹುಶಃ ಅವರು ಇದಕ್ಕೆ ಉತ್ತರವನ್ನು ಕೊಡುತ್ತಾರೆಂದು ನಾನು ಭಾವಿಸುತ್ತೇನೆ. ಇತ್ತೀಚೆಗೆ ಫೋನ್ ಕದ್ದಾಲಿಕೆ ನಡೆದಿದೆ ಎನ್ನುವಂಥಾದ್ದು ವರ್ತಮಾನದಿಂದ ಗೊತ್ತಾಗಿದೆ. ಇದು ಇವತ್ತಿನದಲ್ಲ ಹಿಂದೆಯೂ ಕೂಡ ಈ ಮನೆಯಲ್ಲಿ ಈ ವಿಷಯ ಪ್ರಸ್ತಾಪವಾಗಿತ್ತು. ಹಿಂದಿನ ಮುಖ್ಯಮಂತ್ರಿಗಳಾಗಿದ್ದಂತಹ ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಪ್ರಸ್ತಾಪವಾಗಿತ್ತು, ಮಾನ್ಯ ಬೊಮ್ಮಾಯಿಯವರ ಕಾಲದಲ್ಲಿ ಮತ್ತು ಮಾನ್ಯ ವೀರೇಂದ್ರ ಪಾಟೀಲ್‌ರವರ ಕಾಲದಲ್ಲಿ ಪ್ರಸ್ತಾಪವಾಗಿತ್ತು. ಹೀಗೆ ಅನೇಕ ಕಾಲದಲ್ಲಿಯೂ ಕೂಡ ಸಮಯಾನುಸಾರವಾಗಿ ಸದನದಲ್ಲಿ ಈ ರೀತಿಯಾಗಿ

ಪ್ರಸ್ತಾಪವಾಗಿದೆ. ಪ್ರಸ್ತಾಪವಾಗುವುದಕ್ಕೆ ಕಾರಣವಿಷ್ಟೆ. ದೂರವಾಣಿ ಕದ್ದಾಲಿಕೆಯಲ್ಲಿ ವಿರೋಧ ಪಕ್ಷದ ನಾಯಕರುಗಳು ಆ ಪಕ್ಷದಲ್ಲಿರುವಂತಹ ರೆಸಿಡೆಂಟ್ ಲೀಡರ್ಸ್‌ಗಳು ಮತ್ತು ಪತ್ರಿಕಾ ಮಿತ್ರರು ಮಿಡಿಯಾ ಪರ್ಸನ್ಸ್, ಎಲೆಕ್ಟ್ರಿಕ್ ಮಿಡಿಯಾವನ್ನು ಕೂಡ ಇದರಲ್ಲಿ ಇನ್‌ವಾಲ್ವ್ ಮಾಡಿಕೊಂಡು ಇವತ್ತಿನ ದಿವಸ ಟೆಲಿಫೋನ್ ಕದ್ದಾಲಿಕೆ ಮಾಡುತ್ತಿದ್ದಾರೆಂಬ ವದಂತಿ ಇದೆ. ನನಗಿಂತ ಹೆಚ್ಚಾಗಿ ಮಾನ್ಯ ರಾಮಕೃಷ್ಣ ಹೆಗಡೆಯವರು ಮೊನ್ನೆ ಚಿತ್ರದುರ್ಗದಲ್ಲಿ ಭಾಷಣ ಮಾಡುವಂತಹ ಸಂದರ್ಭದಲ್ಲಿ ಹೇಳಿದ್ದಾರೆಂದು ನಾನು ಹೇಳಬೇಕಾಗಿಲ್ಲ. ಆದರೆ ಹೊಸ ಮುಖ್ಯಮಂತ್ರಿಗಳು ಬದಲಾವಣೆಯಾದ ಹಾಗೆ ಹೊಸ ಲಿಸ್ಟ್ ಅನ್ನು ಇಂಟೆಲಿಜೆನ್ಸ್ ಡಿಪಾರ್ಟ್‌ಮೆಂಟಿನಿಂದಾಗಲಿ, ಚೀಫ್ ಸೆಕ್ರೆಟರಿಯಿಂದಾಗಲಿ, ಅಥವಾ ಮುಖ್ಯಮಂತ್ರಿಗಳ ಮುಖಾಂತರ ಯಾರ್ಯಾರ ದೂರವಾಣಿ ಕದ್ದಾಲಿಕೆ ಮಾಡ ಬೇಕೆಂದು ಹೇಳಿದ್ದಾರೋ ಸಲಹೆ ಕೋಟ್ಟಿದ್ದಾರೋ ಅದರ ಮೇಲೆ ಇವತ್ತಿನ ದಿವಸ ದೂರವಾಣಿ ಕದ್ದಾಲಿಕೆಯಾಗುತ್ತಿದೆ ಎಂದು ಈ ವಿಷಯ ಅನೇಕ ಸಾರಿ ಸದನದಲ್ಲಿ ಚರ್ಚೆಗೆ ಬಂದಾಗ ಬಹಿರಂಗವಾಗಿದೆ. ಇದರಿಂದ ನಮಗೆ ಗೊತ್ತಾಗಬೇಕು. ನಾವು ಎಲ್ಲಿ ನಿಂತಿದ್ದೇವೆ. ಈ ಸದನದಲ್ಲಿ ಯಾವ್ಯಾವ ಸದಸ್ಯರ ದೂರವಾಣಿ ಕದ್ದಾಲಿಕೆಯಾಗುತ್ತಿದೆ? ವಿರೋಧಪಕ್ಷದ ನಾಯಕರಾದ ಶ್ರೀ ಬಿ.ಎಸ್. ಯಡಿಯೂರಪ್ಪ, ಶ್ರೀ ನಂಜೇಗೌಡರದು, ಮಾನ್ಯ ವಾಟಾಳ್ ನಾಗರಾಜ್‌ರವರದು, ನಮ್ಮದು, ಈ ಕಡೆಯ ಸದಸ್ಯರದು, ಮತ್ತು ಆ ಕಡೆ ಮುಖಂಡರುಗಳದು ಹೀಗೆ ಇವತ್ತಿನ ದಿವಸ ಲಿಸ್ಟ್‌ನಲ್ಲಿದೆ. ಹೀಗಾದರೆ ನಾವು ಏನು ಮಾತನಾಡಬೇಕು, ಯಾವುದನ್ನು ಬಿಡಬೇಕು, ಎಂಬುದನ್ನು ಯೋಚನೆ ಮಾಡ ಬೇಕಾಗಿದೆ ಅದಕ್ಕಾಗಿ ತಮ್ಮ ಮುಖಾಂತರ ನಮಗೆ ರಕ್ಷಣೆಬೇಕೆಂದು ನಾನು ಕೇಳುತ್ತೇನೆ.

11-40 ಎ. ಎಂ.

ಯಾರ್ಯಾರ ಹೆಸರಿದೆ, ಇಂತಿಂಥವರ ಪಟ್ಟಿ ಇದೆ ಎಂದು ಅವರು ಹೇಳಿದ್ದರೆ ನಮಗೂ ಕೂಡ ಗೊತ್ತಾಗುತ್ತದೆ. ಇಲ್ಲದಿದ್ದರೆ ಏನಾಗುತ್ತದೆ ಎಂದರೆ, ನೀವಾಗಿ ನಮಗೆ ಸಂವಿಧಾನದ ಪ್ರಕಾರ ಸಿಕ್ಕಂಥ ಒಂದು ಸ್ವಾತಂತ್ರ್ಯ ಏನಿದೆ, ಆ ವಾಕ್ ಸ್ವಾತಂತ್ರ್ಯವನ್ನು ಕಸಿದು ಕೊಂಡಂತಾಗುತ್ತದೆ. ಆರ್ಟಿಕಲ್ 19 ಏನು ಹೇಳುತ್ತದೆ? ಆರ್ಟಿಕಲ್ 19 ನಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. `` Protection of certain rights regarding freedom of speech, etc.- (1) All citizens shall have the right (a) to freedom of speech and expression'' ಅಂತ ಇದೆ ಇದು ಸೆಕ್ಷನ್ 19(ಎ) ಇದರ ಪ್ರಕಾರ ನಮ್ಮೆಲ್ಲರಿಗೆ ಸ್ವಾತಂತ್ರ್ಯ ಇದೆ. ನಮ್ಮ ಸ್ವಾತಂತ್ರ್ಯಕ್ಕೆ ಕಡಿವಾಣ ಹಾಕತಕ್ಕಂಥ, ಅದನ್ನು ಕಿತ್ತುಕೊಳ್ಳತಕ್ಕಂಥ ಅಧಿಕಾರ ಈ ಸರ್ಕಾರಕ್ಕೆ ಇದೆಯೇ? ಮತ್ತೆ ಯಾವ ಕಾರಣಕ್ಕಾಗಿ ಕಡಿವಾಣ ಹಾಕಬಹುದು ಎಂದು ಕೆಲವು ರೀಸನೇಬಲ್ ರಿಸ್ಟ್ರಿಕ್ಷನ್ ಇವೆ. ಆದರೆ ಅದು ಯಾವಾಗ ಎಂದರೆ, ಎಮರ್ಜೆನ್ಸಿ ಇದ್ದಾಗ ಅಥವಾ ಆ್ಯಂಟಿ ನ್ಯಾಷನಲಿಸ್ಟ್ ಇದ್ದರೆ, ಗುಂಡಾಗಳು ಇದ್ದರೆ, ಎಕನಾಮಿಕ್ ಅಫೆಂಡರ್ಸ್ ಇದ್ದರೆ, ಅಥವಾ ದೇಶದ ವಿರುದ್ಧ ಯಾವುದಾದರೂ ದೇಶದ್ರೋಹ ಕೆಲಸವನ್ನು ಮಾಡುತ್ತಿದ್ದರೆ ಇಂತಹದ್ದರ ಬಗ್ಗೆ ಕಡಿವಾಣ ವನ್ನು ಹಾಕಬೇಕು, ರೀಸನೇಬಲ್ ರಿಸ್ಟ್ರಿಕ್ಷನ್ಸ್ ಆ ಒಂದು ಸ್ವಾತಂತ್ರ್ಯದ ಮೇಲೆ ಇರಬೇಕು ಎನ್ನತಕ್ಕದ್ದು ಇದೆ. ಆದರೆ ಇವತ್ತು ಏನಾಗಿದೆ? ಇವತ್ತು ಸಾರಸಗಟಾಗಿ ಎಲ್ಲರ ಮೇಲೆ, ಎಲ್ಲರ ಟೆಲಿಫೋನ್ ಅನ್ನು ಟ್ಯಾಪ್ ಮಾಡುತ್ತಿದ್ದಾರೆ ಎನ್ನತಕ್ಕಮಾತನ್ನು ಅವರ ಲೀಡರ್, ಅವರ ಮುಖಂಡರೇ ಇವತ್ತಿನ ದಿವಸ ಬಹಿರಂಗವಾಗಿ ಹೇಳುತ್ತಿದ್ದಾರೆ. ಅಂದರೆ ಜನತಾದಳದ ಲೀಡರ್ ಎಂದು ತಿಳಿದುಕೊಳ್ಳಬೇಕು. ನೀವು ಇಲ್ಲವೆಂದು ಹೇಳಿಕೊಂಡರೂ ಕೂಡ ಅವರಿಗೆ ಬೆಂಬಲ ನೀಡುತ್ತೀರಿ, ಇದ್ದಾರೆಂದರೂ ನೀಡುತ್ತೀರಿ, ಆ ಮಾತು ಬೇರೆ. ಸರಿ, ಈಗ ನೀವು ಇಲ್ಲವೆಂದರೆ ಇಲ್ಲ. ನೀವು disown ಮಾಡಿ, ನಾವೇನು

ಆದಕ್ಕೆ ಅಡ್ಡಿ ಬರುವುದಿಲ್ಲ. ಆದರೆ ಅವರನ್ನು ಇನ್ನೂ ನಂಬಿಕೊಂಡಂಥ ಜನ ನಿಮ್ಮಲ್ಲಿ ಇದ್ದಾರೆ, ಅವರನ್ನು ಇನ್ನೂ ಹಿಂಬಾಲಿಸತಕ್ಕಂಥ ಜನ ಇದ್ದಾರೆ, ಇನ್ನೂ ಅವರ ಶಿಷ್ಯರು ನಿಮ್ಮಲ್ಲಿ ಮಂತ್ರಿಗಳಾಗಿದ್ದಾರೆ, ಲೋಕಸಭೆ ಸದಸ್ಯರಿದ್ದಾರೆ. ಆದಕ್ಕಾಗಿ ಇವತ್ತು ಸುಮ್ಮನೆ ಅವರ ಬೆಂಬಲಿಗರು ನಮ್ಮಲ್ಲಿ ಯಾರೂ ಇಲ್ಲವೆಂದು ಹೇಳಿಕೊಳ್ಳುವುದು ಅಷ್ಟು ಸರಿಯಲ್ಲ. ಅದು ಏನೇ ಇರಲಿ....

MR. SPEAKER :- Anyway it is not our concern. ಯಾರು ಯಾರ ಜೊತೆಗಾದರೂ ಇದ್ದುಕೊಳ್ಳಲಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ :- ಅಧ್ಯಕ್ಷರೇ, ತಮಗೂ ಗೊತ್ತಿದೆ. ಅವರ ಬೆಂಬಲಿಗರನ್ನು ತೆಗೆಯಬೇಕೆನ್ನುವ ಎಜಿಟೇಷನೂ ನಡೆದಿದೆ, ಮಾತುಕತೆಗಳು ನಡೆದಿದೆ ಅನೇಕ ಚರ್ಚೆಗಳು ಈ ದಿನ ಆಗುತ್ತಿದೆ.

ಅಧ್ಯಕ್ಷರು :- ನನಗೆ ಗೊತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಇದನ್ನು ಬಹಳ ಗುಟ್ಟಾಗಿ ಚರ್ಚೆ ಮಾಡುತ್ತಿದ್ದಾರೆ, ಯಾರನ್ನು ಯಾವಾಗ ತೆಗೆಯಬೇಕು, ಯಾವ ಸಂದರ್ಭದಲ್ಲಿ ತೆಗೆಯಬೇಕು, ತೆಗೆದರೆ ಆದರ ಪರಿಣಾಮವೇನಾಗುತ್ತದೆ ಎನ್ನತಕ್ಕ ಯೋಚನೆಯನ್ನು ಮಾಡಿ, ಆದರ for and against consequences ನೋಡಿ ಮಾಡಬೇಕೆಂದು ತೀರ್ಮಾನ ಮಾಡುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :- ನೀವು ಮಾತನಾಡುವುದು ನೋಡಿದರೆ ನಿಮ್ಮ ಕಡೆಯಿಂದ ಟ್ಯಾಪ್ ಮಾಡಿದಂತೆ ಕಾಣಿಸುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಇಲ್ಲ, ಮೊನ್ನೆ, ಪದ್ಮನಾಭನಗರದಲ್ಲೇ ತಾವು ಮತ್ತು ಸಿಂಧ್ಯಾರವರು ಸ್ಪಷ್ಟವಾಗಿ 10, 15 ನಿಮಿಷ ಇದರ ಬಗ್ಗೆ ಚರ್ಚೆಯಾಗಿದೆ. ಆದು ನರಸಿಂಹರಾಯರ ಬಗ್ಗೆ, ಹಾಗೂ ಟೆಲಿಫೋನ್ ಟ್ಯಾಪಿಂಗ್ ಬಗ್ಗೆ ಮತ್ತು ಮಂತ್ರಿಗಳನ್ನು ತೆಗೆಯುವುದರ ಬಗ್ಗೆ ಅಲ್ಲ. ಅಧ್ಯಕ್ಷರೆ, ಆದಕ್ಕಾಗಿ ನಾನು ಇವತ್ತು ಆರ್ಟಿಕಲ್ 19 ಪ್ರಕಾರ ನಮ್ಮ "Freedom of speech and expression" ಎನಿದೆ ಇದಕ್ಕೆ ದೊಡ್ಡ ಒದೆತವನ್ನು ಹಾಕತಕ್ಕಂಥ ಈ ಸರ್ಕಾರ ಇವತ್ತು ಕುತಂತ್ರ ಮಾಡಿದೆ. ಇಲ್ಲ, ಟೆಲಿಗ್ರಾಫಿಕ್ ಆಕ್ಟ್ ಪ್ರಕಾರ ಕೂಡ ಎಲ್ಲಾ ಶಾಸಕರ ಬಗ್ಗೆ ಅಥವಾ ನಾರ್ಮಲ್ ಪಿರಿಡ್‌ನಲ್ಲೇ ಯಾರಾದರೂ ಟೆಲಿಫೋನ್ ಅನ್ನು ಟ್ಯಾಪ್ ಮಾಡಬೇಕೆನ್ನುವುದಿಲ್ಲ. ಆದರಲ್ಲೂ ಕೂಡ ಈ ನಮ್ಮ ಟೆಲಿಗ್ರಾಫ್ ಆಕ್ಟ್‌ನಲ್ಲೂ ಕೂಡ ಎಂತಹವರ ಟೆಲಿಫೋನ್‌ಗಳನ್ನು ನೀವು ಟ್ಯಾಪ್ ಮಾಡಬಹುದೆಂದು ಸ್ಪಷ್ಟಪಡಿಸಿದ್ದಾರೆ.

ಅಧ್ಯಕ್ಷರು :- ಈ ಸದನದಲ್ಲೇ ಸುಮಾರು ಸಾರಿ ಡಿಬೇಟ್ ಎಲ್ಲಾ ಆಗಿದೆ;

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಚರ್ಚೆ ಎಂದರೆ, ಈಗ ನಮಗೆ ಗೊತಗಬೇಕಲ್ಲ? ಆವಾಗ ಹೆಸರನ್ನು ಹೇಳಿದರು, ಕೊನೆಯವರೆಗೆ ಏನಾಯಿತು ಎಂದರೆ, ಇಲ್ಲಿ ನೀವು ಹೆಸರನ್ನು ಹೇಳುವುದಕ್ಕೆ ತಯಾರಿಲ್ಲದೆ ಇರುವಾಗ ದಿಲ್ಲಿಯಲ್ಲಿ ಶ್ರೀಮಾನ್ ಜಾಖಡ್‌ರವರು ಅಧ್ಯಕ್ಷರಾಗಿದ್ದಾಗ, ಆಂದಿನ ಕಾಲದಲ್ಲಿ ಅಟಲ್ ಬಿಹಾರಿ ವಾಜಪೇಯಿ ಯವರು ಕೂಡ ಇದರ ಬಗ್ಗೆ ಪಾರ್ಟಿಸಿಪೇಟ್ ಮಾಡಿದ್ದಾರೆ. ಆ ಕಾಲದಲ್ಲಿ ಜಾರ್ಜ್ ಫರ್ನಾಂಡೀಸ್‌ರವರು ಪಾರ್ಟಿಸಿಪೇಟ್ ಮಾಡಿದ್ದಾರೆ. ಈ ಎಲ್ಲಾ ಹೆಸರುಗಳನ್ನು ಅಲ್ಲಿ ಓದಿ ಹೇಳಿದರು, ನೀವು ಹೇಳುವುದಕ್ಕಾಗಲಿಲ್ಲ. ಇದು ಪ್ರೈವೇಟ್ ಇದೆ, ಇದು ಕಾನ್‌ಫಿಡೆನ್ಷಿಯಲ್ ಇದೆ, ಇದು ಸೀಕ್ರೆಸಿ ಇದೆ ಎಂದು ನೀವು ಹೇಳಲಿಲ್ಲ. ಆದರೆ

ಯಾವ ಲಿಸ್ಟ್ ನಿಮಗೆ ಸಿಕ್ರೇಟ್ ಆಗಿದೆ ಅಥವಾ ಸಿಕ್ರೆಸಿ ಇದೆ ಎಂದು ನೀವು ತಿಳಿದುಕೊಂಡಿದ್ದೀರಿ, ನಮ್ಮ ಸಿಕ್ರೆಸಿಗೆ ನಮ್ಮ ಫ್ರೈವೆಸಿಗೆ ಕೈಹಾಕತಕ್ಕಂಥ ಕೆಲಸವನ್ನು ನೀವು ಮಾಡುತ್ತಿದ್ದೀರಲ್ಲ? ಅಧ್ಯಕ್ಷರೆ, ಅದಕ್ಕಾಗಿ ಅವರ ಹೆಸರುಗಳೇನು? ಯಾರ್ಯಾರದ್ದನ್ನು ಮಾಡಿದ್ದೀರಿ? ಅದು press people ದೇ ಇರಬಹುದು ಅಥವಾ ವಿರೋಧಪಕ್ಷದ ಮುಖಂಡರದೇ ಇರಬಹುದು; ಆ ಕಡೆ ಇರತಕ್ಕಂಥ ಸದಸ್ಯರದೇ ಇರಬಹುದು. ಅದಕ್ಕಾಗಿ ನಮ್ಮ ಹಕ್ಕಿಗೆ ಈ ಒಂದು ಚ್ಯುತಿ ಬಂದಾಗ ಇದನ್ನು ರಕ್ಷಣೆಯನ್ನು ಮಾಡತಕ್ಕಂಥ ಜವಾಬ್ದಾರಿ ತಮ್ಮಮೇಲೂ ಕೂಡ ಇದೆ. ಅದಕ್ಕಾಗಿ ಆ ಲಿಸ್ಟ್‌ಅನ್ನು ತರಿಸಿ ಈ ಸದನದ ಟೇಬಲ್ ಮೇಲೆ ಇಡಬೇಕು ನಮಗೂ ಕೂಡ ಗೊತ್ತಾಗಲಿ, ಈ ಸದನಕ್ಕೂ ಕೂಡ ಗೊತ್ತಾಗಲಿ, ಯಾವ ಉದ್ದೇಶಕ್ಕಾಗಿ ಟೆಲಿಫೋನ್ ಟ್ಯಾಪಿಂಗ್ ಇವತ್ತಿನ ದಿವಸ ನಡೆದಿದೆ ಎನ್ನುವುದನ್ನು ಕೂಡ ಸ್ಪಷ್ಟಪಡಿಸಬೇಕು. ಮತ್ತು ಇದರ ಬಗ್ಗೆ ದೀರ್ಘವಾದ ಚರ್ಚೆಯನ್ನು ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು, ಇಲ್ಲದಿದ್ದರೆ ನಾವು ಪುನಃ ಪ್ರಿವಿಲೇಜ್ ಮೋಷನ್ ಮುಖಾಂತರ ಈ ಸದನದ ಮುಂದೆ ತರಬೇಕಾಗುತ್ತದೆ. ಅದಕ್ಕಾಗಿ ದಯವಿಟ್ಟು ತಾವು ಇದಕ್ಕೆ ಮಾಡಿಕೊಡಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

+ **ಶ್ರೀ ಬಿ. ಎಸ್. ಯಡಿಯೂರಪ್ಪ** (ವಿರೋಧ ಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೆ, ತಾವು ನಿನ್ನೆಯ ದಿವಸ ಪ್ರಶ್ನೋತ್ತರ ವೇಳೆ ಆದ ಮೇಲೆ ಬೇಡಿಕೆಯ ಮೇಲೆ ಚರ್ಚೆಯಾಗಲಿ ಎಂದು ಕಾಲಿಂಗ್ ಅಟೆಂಷನ್ ಅನ್ನು ನೀವು ಮುಂದೂಡಿದಿರಿ. ಹೀಗಾಗಿ ನಾನು ನಿಮ್ಮ ಕೊಠಡಿಗೆ ಬಂದು ಅಥವಾ ನೀವು ಹೇಳಿಕಳುಹಿಸಿ ಶೂನ್ಯ ವೇಳೆಯಲ್ಲಾಗಲಿ ಬೇರೆ ವೇಳೆಯಲ್ಲಾಗಲಿ ಪ್ರಸ್ತಾಪ ಮಾಡಿದರೆ ಈ ಬೇಡಿಕೆಯ ಚರ್ಚೆಗೆ ನಮ್ಮ ಕಡೆಯಿಂದ 25 ಹೆಸರುಗಳನ್ನು ಕೊಟ್ಟಿದ್ದೇವೆ ಅದರಲ್ಲಿ ಮೂರು ಜನರು ಸಹ ಮಾತನಾಡಿಲ್ಲ. ಇನ್ನೂ ಹತ್ತಾರು ಜನ ಮಾತನಾಡಬೇಕು. ರಾತ್ರಿ ಒಂದು ಗಂಟೆಯ ವರೆಗೂ ನಮ್ಮ ಶಾಸಕಾಂಗದ ಸಭೆಯಾಯಿತು, ಏತಕ್ಕಾಗಿ ನಾವು ಇಲ್ಲಿಗೆ ಬಂದಿದ್ದೇವೆ, ಇಲ್ಲಿ ನಮಗೆ ಅವಕಾಶ ಸಿಗದಿದ್ದರೆ ನಾವು ಏತಕ್ಕಾಗಿ ಕುಳಿತುಕೊಳ್ಳಬೇಕು ಎನ್ನುವವರೆವಿಗೂ ಚರ್ಚೆಯಾಯಿತು. ವಿರೋಧಪಕ್ಷದ ಕಾಂಗ್ರೆಸ್‌ನ ಮುಖಂಡರಾದ ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಇವತ್ತು ಬಹಳ ಪ್ರಮುಖವಾದ ವಿಷಯವನ್ನು ಎತ್ತಿದ್ದಾರೆ. ಈ ಒಂದು ಟೆಲಿಫೋನ್ ಟ್ಯಾಪಿಂಗ್ ಬಗ್ಗೆ ಈ ಹಿಂದೆ ಇಲ್ಲ ಪ್ರಸ್ತಾಪವಾದಾಗ ರಾಮಕೃಷ್ಣ ಹೆಗ್ಡೆಯವರು ರಾಜೀನಮೆ ಕೊಡುವಂಥ ಸಂದರ್ಭ ಬಂತು, ನಿಮ್ಮ ಸ್ಪೀಕರ್‌ರವರ ಕೊಠಡಿಗೆ ಬಂದು ಅದೆಲ್ಲಾ ವಿವರಗಳನ್ನು ನೋಡುವಂಥ ಒಂದು ಸಂದರ್ಭವೂ ಬಂದಿತ್ತು. ಪತ್ರಿಕೆಯಲ್ಲಿ ಬಹಿರಂಗವಾಗಿ ಈಗಾಗಲೇ ನನ್ನ ಹೆಸರು, ಈಶ್ವರಪ್ಪನವರ ಹೆಸರು, ಖರ್ಗೆಯವರ ಹೆಸರು, ಅನೇಕ ವಿರೋಧಪಕ್ಷದ ಮುಖಂಡರು, ನಿಮ್ಮ ಕಡೆಯವರ ಅನೇಕ ಹೆಸರುಗಳು ಪ್ರಸ್ತಾಪವಾಗುತ್ತಿದೆ. ಪ್ರಶ್ನೆ ಏನು, ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಒಂದು ವಿರೋಧಪಕ್ಷವಾಗಿ ಅನೇಕ ಕೆಲಸ ಕಾರ್ಯಗಳನ್ನು ನಾವು ಮಾಡುತ್ತಿರುತ್ತೇವೆ. ಆದರೆ ಇದನ್ನು ಇವತ್ತು ವಾಮಮಾರ್ಗ ಎಂದು ನಾನು ತಿಳಿದುಕೊಂಡಿದ್ದೇನೆ. ಒಂದು ರೀತಿ ಬ್ಲಾಕ್ ಮೇಲಿಂಗ್, ಒಂದು ಆಡಳಿತ ಪಕ್ಷ ಈ ದೂರವಾಣಿ ಕದ್ದಾಲಿಕೆಯನ್ನು ಕೇಳುವಂಥದ್ದು, ಅವರ ಚಲನ ವಲನಗಳ ಮೇಲೆ ಗಮನ ಇಡುವಂಥದ್ದು ಈ ಒಂದು ಹೀನ ಪ್ರವೃತ್ತಿ ಏನಿದೆ ಇದು ಯಾವುದೇ ಒಂದು ಪ್ರಜಾತಂತ್ರ ವ್ಯವಸ್ಥೆಯಲ್ಲಿರುವಂಥ ಸರ್ಕಾರಕ್ಕೆ ಶೋಭೆ ತರುವಂಥ ಸಂಗತಿಯಲ್ಲ. ಮಾನ್ಯ ಖರ್ಗೆಯವರು ಹೇಳಿದಂತೆ ಇದು ಲೋಕಸಭೆಯಲ್ಲೂ ಚರ್ಚೆಯಾಗಿದೆ, ಇಲ್ಲೂ ಚರ್ಚೆಯಾಗಿದೆ, ಇದು ನಡೆಯುತ್ತಿರುವುದು ನಿಜ. ನೀವು ಹೇಳುತ್ತೀರೋ ಇಲ್ಲವೋ,

ನೀವು ಒಪ್ಪುತ್ತಿರೋ ಇಲ್ಲವೊ, ನಮಗೆ ಲೋಕಸಭೆಯ ಚುನಾವಣೆಗೆ ಮುನ್ನ ಅನೇಕ ಸಂದರ್ಭಗಳಲ್ಲಿ ನಡೆದಂಥ ಘಟನಾವಳಿಗಳನ್ನು ನೋಡಿದರೆ ಈ ಟೆಲಿಫೋನ್ ಟ್ಯಾಪಿಂಗ್ ನಿಶ್ಚಿತವಾಗಿ ಆಗುತ್ತಿದೆ ಎನ್ನುವುದು ನಮಗೆ ಅನೇಕ ಸಂದರ್ಭಗಳಲ್ಲಿ ಮನವರಿಕೆಯಾಗಿದೆ. ಅದನ್ನು ದಯಮಾಡಿ ಸ್ಪಷ್ಟ ಮಾಡಿ. ನಿಮ್ಮ ಸರ್ಕಾರ ಬಂದ ಮೇಲೆ, ಕೆಲವೊಂದು ದೇಶದ್ರೋಹಿ ಚಟುವಟಿಕೆಗಳ ಬಗ್ಗೆ ನೀವು ದೂರವಾಣಿ ಕದ್ದಾಲಿಕೆಯನ್ನು ಕೇಳಿಕೊಂಡು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದನ್ನು ನಾವು ಕೇಳಿದ್ದೇವೆ. ಆದರೆ ಒಂದು ಪ್ರತಿಪಕ್ಷವನ್ನು ಹತ್ತಿಕ್ಕುವುದಕ್ಕೋಸ್ಕರ ಅಥವಾ ಆಡಳಿತ ಪಕ್ಷದ ಇನ್ನೊಂದು ಗುಂಪನ್ನು ಸದೆಬಡಿಯುವುದಕ್ಕೋಸ್ಕರ ಈ ರೀತಿ ದುರುಪಯೋಗ ಮಾಡಿಕೊಳ್ಳವಂಥ ಪ್ರವೃತ್ತಿ ಏನಿದೆ, ಇದು ಯಾವುದೇ ಒಂದು ಸರ್ಕಾರಕ್ಕೆ ಶೋಭೆಯನ್ನು ತರುವಂಥ ಸಂಗತಿಯಲ್ಲ. ಅದಕ್ಕಾಗಿ ಇದು ಆಗುತ್ತಿದೆಯೋ ಇಲ್ಲವೋ ಎನ್ನುವ ಬಗ್ಗೆ ನೀವು ಸ್ಪಷ್ಟವಾದ ಸ್ಪಷ್ಟೀಕರಣವನ್ನು ನೀಡಿದರೆ ಕೆಲವು ಕ್ಲಾರಿಫಿಕೇಷನ್ ಕೇಳಬಹುದು. ನಿಮಗೇನು ಅನುಮಾನ ಬಂದಿದೆ, ಸಂಶಯ ಬಂದಿದೆ ಎಂದರೆ, ಒಬ್ಬ ಮಾಜಿ ಮುಖ್ಯಮಂತ್ರಿಗಳು, ಜವಾಬ್ದಾರಿ ಸ್ಥಾನದಲ್ಲಿರುವಂಥ ರಾಜ್ಯಸಭಾ ಸದಸ್ಯರು, ಸನ್ಮಾನ್ಯ ರಾಮಕೃಷ್ಣ ಹೆಗ್ಗಡೆಯವರು ಬಹಿರಂಗವಾಗಿ ಈ ಮಾತನ್ನು ಹೇಳುತ್ತಿದ್ದಾರೆ ಎನ್ನುವುದಾದರೆ, ನಮಗೂ ಅನೇಕ ಸಂದರ್ಭಗಳಲ್ಲಿ ಅದು ಮನವರಿಕೆ ಯಾಗಿರುವುದರಿಂದ, ದಯಮಾಡಿ ತಾವು ಇದರ ಬಗ್ಗೆ ಸ್ಪಷ್ಟೀಕರಣ ನೀಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

+ **ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ ಕ್ಷೇತ್ರ) :-** ಮಾನ್ಯ ಅಧ್ಯಕ್ಷರೇ, ಈ ದೂರವಾಣಿ ಕದ್ದಾಲಿಕೆಯ ಪ್ರಕರಣದಲ್ಲಿ ಹಿಂದಿನ ಮುಖ್ಯಮಂತ್ರಿಗಳಾದ ಶ್ರೀಮಾನ್ ರಾಮಕೃಷ್ಣ ಹೆಗ್ಡೆಯವರು ತಮ್ಮ ಅಧಿಕಾರವನ್ನು ತ್ಯಾಗ ಮಾಡಿದರು. ಈ ಬಗ್ಗೆ ಇದೇ ಸದನದಲ್ಲಿ ಎರಡು ದಿನ ಸಮಗ್ರವಾಗಿ ಚರ್ಚೆ ನಡೆದು ಆ ಚರ್ಚೆಯಲ್ಲಿ ಶ್ರೀಮಾನ್ ವೀರೇಂದ್ರ ಪಾಟೀಲ್‌ರವರು ಬಹುಶಃ ಇತಿಹಾಸದಲ್ಲೇ ಅತ್ಯಂತ ಹೆಚ್ಚಿನ ಮಟ್ಟದಲ್ಲಿ ಚರ್ಚೆಗೆ ಉತ್ತರವನ್ನು ನೀಡದರು. ಆಗ ನಾವೆಲ್ಲಾ ಈ ಸದನದಲ್ಲಿ ಉತ್ತಮವಾದ ಹಾಗೂ ಧೀರ್ಘವಾದ ಚರ್ಚೆಯಾಯಿತು ಎಂದು ನಗನಿಸಿತು. ಇದಾದ ನಂತರ, ಬಂಗಾರಪ್ಪನವರ ಕಾಲದಲ್ಲೂ ಇದು ಬಂತು. ತಮ್ಮ ಕಾಲದಲ್ಲೂ ದೂರ ವಾಣಿ ಕದ್ದಾಲಿಕೆ ಇದೆ ಎಂದು ಬಂದಾಗ ಒಂದು ತೀರ್ಮಾನಕ್ಕೆ ಬಂದು ಇಡೀ ಸದನ ಸಭಾಧ್ಯಕ್ಷರ ಕೊಠಡಿಯಲ್ಲಿ ಗುಪ್ತದಳದವರು ಈ ದೂರವಾಣಿಯ ಬಗ್ಗೆ ಏನೇನು ಇಟ್ಟಿದ್ದಾರೆ ಇದೆಲ್ಲವನ್ನೂ ಸಮಗ್ರವಾಗಿ ಕಡತವನ್ನು ನೋಡತಕ್ಕಂಥ ಒಂದು ಅವಕಾಶ ಸದನದಲ್ಲಿ ತೀರ್ಮಾನವಾಗಿ ಆ ಅವಕಾಶ ದೊರಕಿತು. ಹಿಂದೆ ಅಧ್ಯಕ್ಷರಾಗಿದಂಥ ಶ್ರೀಮಾನ್ ಎಸ್. ಎಂ. ಕೃಷ್ಣರವರು ಎಲ್ಲಾ ಮುಖಂಡರುಗಳನ್ನು ಕರೆಯಿಸಿ, ಸರ್ಕಾರದ ಗುಪ್ತದಳ ಕಡತಗಳನ್ನೆಲ್ಲಾ ನೋಡಿ, ಅದರಲ್ಲಿ ಯಾರ್ಯಾರು ದೂರವಾಣಿಯನ್ನು ಕದ್ದು ಕೇಳಿದ್ದಾರೆ ಎನ್ನುವುದು ನಮಗೆ ಪರಿಚಯವಾಯಿತು. ಇದು ಬಹಳ ಗುರುತರವಾದಂಥ ಒಂದು ಪ್ರಶ್ನೆ, ಗಂಭೀರವಾದ ಪ್ರಶ್ನೆಯ ಹಿಂದಿನ ಸರ್ಕಾರ ಬಂದ ತಕ್ಷಣ, ಶ್ರೀಮಾನ್ ದೇವೇಗೌಡರು ಮುಖ್ಯ ಮಂತ್ರಿಯಾದಾಗ ಪ್ರಪ್ರಥಮವಾಗಿ ಇದೇ ಸದನದಲ್ಲಿ ಒಂದು ಹೇಳಿಕೆ ಕೊಟ್ಟರು. ನಮ್ಮ ಸರ್ಕಾರ ದೂರವಾಣಿಯನ್ನು ಕದ್ದು ಕೇಳುವುದಕ್ಕೆ ಅವಕಾಶ ಕೊಡುವುದಿಲ್ಲ, ಇದು ಸ್ಪಷ್ಟವಾದ ನಿರ್ಧಾರ ಎನ್ನತಕ್ಕಂಥ ಮಾತನ್ನು ಇಲ್ಲಿ ಹೇಳಿದರು. ಆದರೆ ಇವತ್ತು ದುರ್ದೈವವೆಂದರೆ, ಆ ಮಾತನ್ನು ಅವರು ಹೇಳಿದ್ದಾರೆ. ಆದರೆ ಈಗ

ಅವರನ್ನು ಬಿಟ್ಟು ಹೊಸ ಸರ್ಕಾರ ಬಂದಿದೆ. ಹೊಸ ಸರ್ಕಾರ ಬಂದಿರುವಾಗ, ಈ ಸರ್ಕಾರ ರಚನೆ ಆಗಬೇಕಾದರೆ ಬಹಳ ಶ್ರಮ ವಹಿಸಿರತಕ್ಕಂಥ ಇವರ ಮಾಜೀ ನಾಯಕರು, ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಒಂದು ಕಡೆ ಮಾತನಾಡುತ್ತಾ, ದೂರವಾಣಿ ಕದ್ದಾಲಿಕೆಯಾಗುತ್ತಿದೆ, ಇದು ಬಹಳ ಅಪಾಯಕಾರಿಯಾದಂಥ ಪರಿಸ್ಥಿತಿ, ಪ್ರಜಾಪ್ರಭುತ್ವಕ್ಕೆ ಒಂದು ಅಪಾಯ ಬಂದು ಒದಗಿದೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಶ್ರೀಮಾನ್ ಖರ್ಗೆಯವರು ಮಾತನಾಡುವಾಗ ಅವರು ಕೆಲವು ಹೆಸರು ಗಳನ್ನು ಪ್ರಸ್ತಾಪ ಮಾಡಿದರು ಅದು ಸತ್ಯ. ಇಲ್ಲಿ ವಿರೋಧ ಪಕ್ಷಗಳ ಕೆಲವು ಮುಖಂಡರುಗಳ, ಶ್ರೀಮಾನ್ ಖರ್ಗೆಯವರು ವಿರೋಧ ನಾಯಕರುಗಳು, ಇಲ್ಲಿರತಕ್ಕಂಥ ಅನೇಕ ಮುಖಂಡರುಗಳ ದೂರವಾಣಿಯನ್ನು ಕದ್ದು ಕೇಳಿರತಕ್ಕಂಥ ನಿದರ್ಶನಗಳಿವೆ ಎನ್ನುವ ಒಂದು ಅನುಮಾನ ಮತ್ತು ನೋವನ್ನು ವ್ಯಕ್ತಪಡಿಸಿದ್ದಾರೆ. ಇದರ ಜೊತೆಗೆ, ಇಲ್ಲಿ ನೀವು ಎಷ್ಟೋ ಹೇಳಿದರೂ ನಿಮ್ಮಲ್ಲಿ ಅತೃಪ್ತರ ಗುಂಪು ಒಂದು ಕಡೆ ಇದೆ. ಅತೃಪ್ತರ ಗುಂಪು ಎಂದರೆ, ನಮ್ಮನ್ನು ಮಂತ್ರಿಮಂಡಳಕ್ಕೆ ಸೇರಿಸಲಿಲ್ಲ ಎನ್ನುವ ನೀತಿ ಇನ್ನೂ ನಿಂತಿಲ್ಲ. ಇನ್ನೂ ಅವರ ಮುಖಂಡರು ಇದ್ದಾರೆ. ಮೊನ್ನೆಯೂ ಪ್ರಧಾನ ಮಂತ್ರಿಯವರು ಬಂದಾಗ ಅವರು ಭೇಟಿ ಮಾಡಿದ್ದಾರೆ ಮತ್ತು ಈಗಲೂ ಸಹ ಅದನ್ನು ಒತ್ತಾಯ ಮಾಡುತ್ತಿದ್ದಾರೆ. ನಮಗೆ ಮಂತ್ರಿ ಮಂಡಲದಲ್ಲಿ ಅವಕಾಶ ಕೊಡಬೇಕು ಎನ್ನತಕ್ಕಂಥಾದ್ದನ್ನು ನಿರಂತರವಾಗಿ ಒತ್ತಾಯ ಮಾಡುತ್ತಿದ್ದಾರೆ, ಇನ್ನೂ ಕೆಲವರು ಬಹಳ ಗೋಪ್ಯವಾಗಿ ನೋವನ್ನು ಅನುಭವಿಸಿ ಬಾಯಿಬಿಡದೇ ಇರತಕ್ಕಂಥ ಮೂಕ ವೇದನೆಯಲ್ಲಿ ಇದ್ದಾರೆ. ರಾಮಕೃಷ್ಣ ಹೆಗಡೆಯವರ ಮೇಲೆ ಬಹಳ ನಂಬಿಕೆ ಇಟ್ಟುಕೊಂಡಿರತಕ್ಕಂಥ ಶಾಸಕರುಗಳು ಮತ್ತು ಮಂತ್ರಿಗಳೂ ಇದ್ದಾರೆ, ಇದು ಸತ್ಯ. ಅದನ್ನೇನೂ ನೀವು ಇಲ್ಲ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಅವರು ಇದ್ದೇ ಇದ್ದಾರೆ. ಆದರೆ ವಿಧಿಯಿಲ್ಲ, ಅವರು ನಾವು ರಾಮಕೃಷ್ಣ ಹೆಗಡೆಯವರ ಪರ ಎಂದು ಹೇಳಿದರೆ, ತಕ್ಷಣವೇ ಅವರು ರಾಜೀನಾಮೆ ಕೊಡಬೇಕಾದಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆದ್ದರಿಂದ ಅವರು ರಾಜೀನಾಮೆ ಕೊಟ್ಟು ಹೊರಗಡೆಗೆ ಹೋಗುವ ಬದಲು, ಬಹಳ ಬುದ್ಧಿವಂತಿಕೆಯಿಂದ ನಾವು ನಿಮ್ಮ ಪರವೇ, ನಿಮ್ಮ ಪರವೇ ಎಂದು ಹೇಳಿಕೊಂಡು ಒಂದು ರೀತಿಯಲ್ಲಿ ಅವರು ಇದ್ದಾರೆ. ಈ ಪರಿಸ್ಥಿತಿಯನ್ನು ನೋಡಿದಾಗ ನಿಮ್ಮಲ್ಲಿ ಮೂರು ಗುಂಪಾಗಿದೆ. ಇದು ಪ್ರಾಮುಖ್ಯವಾದುದು. ದೂರವಾಣಿ ಪ್ರಶ್ನೆ ಬಂದಾಗ, ದೂರವಾಣಿ ಕದ್ದಾಲಿಕೆಯನ್ನು ಕೇಳಬೇಕಾದರೆ ಇದು ಬೇಸ್. ಇದು ಬುನಾದಿ ಎಂದು ನಾನು ಹೇಳುತ್ತಿದ್ದೇನೆ. ಶ್ರೀಮಾನ್ ಸಿದ್ಧರಾಮಯ್ಯನವರೇ, ನಾನು ಇರುವ ವಿಚಾರ ಹೇಳುತ್ತೇನೆ. ತಾವು ಇದರಲ್ಲಿ ವಾದ ಮಾಡಿದಿರಿ. ಇದು ಬುನಾದಿ. ನಿಮ್ಮಲ್ಲಿ ಮೂರು ವರ್ಗವಿದೆ. ಒಂದು ಅತ್ಯಂತ ಪ್ರಚಂಡವಾಗಿ ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಪರ ಇರತಕ್ಕಂಥ ಒಂದು ಗುಂಪು ಇದೆ, ಮತ್ತೊಂದು ಎಂದರೆ, ಮಂತ್ರಿಮಂಡಲ ಸಿಕ್ಕಲಿಲ್ಲ ಎನ್ನತಕ್ಕಂಥ ಇನ್ನೊಂದು ಗುಂಪು ಇದೆ. ಹೀಗೆ ಮೂರು ಗುಂಪುಗಳಿವೆ ಅದನ್ನು ನಾನು ಹೆಚ್ಚು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಆದ್ದರಿಂದ ಈ ಪ್ರಶ್ನೆ ಏಕೆ ಉದ್ಭವವಾಗುತ್ತದೆ ಎಂದು ಹೇಳಿದರೆ, ಇದೆಲ್ಲವನ್ನೂ ಕಂಡುಹಿಡಿಯುವುದಕ್ಕೆ, ಯಾರ್ಯಾರು ಎಲ್ಲೆಲ್ಲಿ ಮಾತನಾಡುತ್ತಿದ್ದಾರೆ, ಏನೇನು ಪರಿಸ್ಥಿತಿ ಇದೆ ಎನ್ನುವುದನ್ನು ನೋಡುವುದಕ್ಕೆ ಎಂದು ಆಥವಾ ಗುಪ್ತದಳದವರೇ

ಈ ಯೋಚನೆಯನ್ನು ಮಾಡಿದ್ದಾರೆಯೇ ಅಥವಾ ಸರ್ಕಾರ ಇದರ ಬಗ್ಗೆ ಚಿಂತನೆ ಮಾಡಿದ್ದಾರೆಯೇ ಎನ್ನತಕ್ಕಂಥಾದ್ದು ನಮಗೆ ಬಹಳ ಪ್ರಾಮುಖ್ಯವಾದಂಥ ವಿಚಾರ. ಆ ಬಗ್ಗೆ ಸರ್ಕಾರ ಪರಿಣಾಮಕಾರಿಯಾಗಿ ತಿಳಿಸಬೇಕು. ಈ ಬಗ್ಗೆ ತಾವು ಒಂದು ಸುದೀರ್ಘವಾದ ಚರ್ಚೆಗೂ ಅವಕಾಶ ಕೊಡಬೇಕಾಗುತ್ತದೆ ಮತ್ತು ಇದು ಹಕ್ಕು ಚ್ಯುತಿಯೂ ಆಗುತ್ತದೆ ಎನ್ನುವ ಮಾತನ್ನು ಏನು ಶ್ರೀಮಾನ್ ಖರ್ಗೆಯವರು ಹೇಳಿದ್ದಾರೆ, ಅದಕ್ಕೆ ನಾನು ಧ್ವನಿಗೂಡಿಸುತ್ತೇನೆ. ಇದರ ಬಗ್ಗೆ ಸರ್ಕಾರದವರು ಏನು ಉತ್ತರ ಕೊಡುತ್ತಾರೆ, ಅವರು ಕೊಟ್ಟ ನಂತರ ನಾವು ಏನು ಹೇಳಬೇಕು ಎನ್ನುವುದನ್ನು ತಮ್ಮ ಮೂಲಕ ಮತ್ತೆ ತಿಳಿಸಬೇಕು ಎಂದು ತಮಗೆ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

+ **ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು) :–** ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಎತ್ತಿರತಕ್ಕಂಥ ಪ್ರಶ್ನೆ ಎಂದರೆ, ಈ ಸರ್ಕಾರ ಕೆಲವು ಮುಖಂಡರು ಗಳ, ಕೆಲವು ಮಾಧ್ಯಮದವರು ಮತ್ತು ನಮ್ಮ ಪಕ್ಷದ ಸದಸ್ಯರು ಇವರ ದೂರವಾಣಿ ಯನ್ನು ಕದ್ದಾಲಿಕೆ ಮಾಡತಕ್ಕಂಥ ಕೆಲಸ ನಡೆಯುತ್ತಿದೆ ಎನ್ನತಕ್ಕಂಥ ಆರೋಪವನ್ನು ಶ್ರೀಮಾನ್ ಖರ್ಗೆಯವರು, ಯಡಿಯೂರಪ್ಪನವರು ಮತ್ತು ವಾಟಾಳ್ ನಾಗರಾಜ್ ರವರು ಪ್ರಸ್ತಾಪ ಮಾಡಿದ್ದಾರೆ. ಈ ಆರೋಪ ಸತ್ಯಕ್ಕೆ ದೂರವಾದುದು ಮತ್ತು ಕಾಲ್ಪನಿಕವಾದುದು ಎಂದು ನಾನು ಹೇಳಬಯಸುತ್ತೇನೆ. ಇಲ್ಲಿ ನಮ್ಮ ಸರ್ಕಾರ ಬಂದ ತಕ್ಷಣೇ, ಶ್ರೀಮಾನ್ ದೇವೇಗೌಡರು ಮುಖ್ಯಮಂತ್ರಿ ಆಗಿದ್ದಾಗ, ವಾಟಾಳ್ ನಾಗರಾಜ್ ರವರೇ ಹೇಳಿದಂತೆ, ನಾವು ಇದನ್ನು ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. ಈ ಸರ್ಕಾರ ಪ್ರಜಾತಂತ್ರದಲ್ಲಿ ನಂಬಿಕೆ ಇಟ್ಟುಕೊಂಡಿರತಕ್ಕಂಥಾದ್ದು, ವ್ಯಕ್ತಿ ಸ್ವಾತಂತ್ರ್ಯದಲ್ಲಿ ನಂಬಿಕೆ ಇಟ್ಟುಕೊಂಡಿರತಕ್ಕಂಥಾದ್ದು, ರಾಜ್ಯಾಂಗಕ್ಕೆ ಗೌರವ ಕೊಡತಕ್ಕಂಥ ಸರ್ಕಾರ ಇದು. ಆದ್ದರಿಂದ ಯಾವುದೇ ಕಾರಣಕ್ಕೆ ರಾಜ್ಯಾಂಗಕ್ಕೆ ಅಪಚಾರವಾಗತಕ್ಕಂಥ, ವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆಯಾಗತಕ್ಕಂಥ, ಅವರು ಯಾರೇ ಇರಲಿ, ವಿರೋಧ ಪಕ್ಷದವರು ಇರಲಿ, ಬೇರೆ ಯಾರೇ ಸಾರ್ವಜನಿಕ ವ್ಯಕ್ತಿಯಿರಲಿ, ಈ ದೇಶದ ಯಾವನೇ ಒಬ್ಬ ಸಾಮಾನ್ಯ ಪ್ರಜೆಯಿರಲಿ, ಆ ಪ್ರಜೆಯ ಸ್ವಾತಂತ್ರ್ಯವನ್ನು ಕಸಿಯತಕ್ಕಂಥ ಹಕ್ಕು ಯಾರಿಗೂ ಕೂಡ ಇಲ್ಲ, ಸರ್ಕಾರಕ್ಕೆ ಕೂಡ ಇಲ್ಲ. ಆದ್ದರಿಂದ ರಾಜ್ಯಾಂಗದಲ್ಲಿ ಏನು ಏಳು ಸ್ವಾತಂತ್ರ್ಯಕ ಗಳನ್ನು ಕೊಟ್ಟಿದ್ದಾರೆ, ಅವುಗಳನ್ನು ಕಸಿದುಕೊಳ್ಳುವುದಕ್ಕೆ ಕೋರ್ಟಿಗೂ ಕೂಡ ಅಧಿಕಾರ ಇಲ್ಲ. ಇದು ಇರುವಂಥ ಪರಿಸ್ಥಿತಿ. ಆದ್ದರಿಂದ ಸರ್ಕಾರ ಯಾವ ಕಾರಣಕ್ಕೂ ಕೂಡ ಯಾವ ವ್ಯಕ್ತಿಯದೂ ಟೆಲಿಫೋನ್ ಕದ್ದಾಲಿಕೆ ಮಾಡತಕ್ಕಂಥ ಕೆಲಸವನ್ನು ಮಾಡಿಲ್ಲ, ಆ ತರಹದ ಸೂಚನೆಯನ್ನೂ ಕೊಟ್ಟಿಲ್ಲ ಮತ್ತು ಅದನ್ನು ಮಾಡುವುದೂ ಇಲ್ಲ ಈ ಸರ್ಕಾರ, ಯಾವ ಸಂದರ್ಭದಲ್ಲೂ, ಯಾವ ಸನ್ನಿವೇಶದಲ್ಲೂ ಕೂಡ ಈ ಕೆಲಸ ಮಾಡುವುದಿಲ್ಲ. ಆದ್ದರಿಂದ ಮಾನ್ಯ ಸದಸ್ಯರುಗಳು ಈ ಬಗ್ಗೆ ಯಾವ ಶಂಕೆ ಇಟ್ಟುಕೊಳ್ಳಬೇಕಾದಂಥ, ಪ್ರಮೇಯವಿಲ್ಲ ಎನ್ನುವುದನ್ನೂ ನಾನು ಸ್ಪಷ್ಟ ಮಾತುಗಳಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಹಿಂದೆ ನಡೆದಿದ್ದೆಲ್ಲವನ್ನೂ ಇಲ್ಲಿ ಚರ್ಚೆ ಮಾಡಿದ್ದೇವೆ. ವೀರೇಂದ್ರ ಪಾಟೀಲರ ಕಾಲದಲ್ಲಿ ಚರ್ಚೆಯಾಗಿದೆ, ಬಂಗಾರಪ್ಪನವರ ಕಾಲದಲ್ಲಿ ಚರ್ಚೆ ಯಾಗಿದೆ, ಎಲ್ಲಾ ಆಗಿದೆ. ನಮ್ಮ ಪಕ್ಷದಲ್ಲಿ ಏನೇನು ನಡೆಯುತ್ತಿದೆ, ಮೂರು ಗುಂಪು

ಇದೆ ಎಂದು ಹೇಳಿದಿರಿ. ನಮ್ಮಲ್ಲಿ ಯಾವ ಗುಂಪೂ ಇಲ್ಲ. ಎಲ್ಲಾ ಪೊಲಿಟಿಕಲ್ ಪಾರ್ಟಿಗಳಲ್ಲಿ, ಪ್ರಜಾತಂತ್ರದಲ್ಲಿ ನಂಬಿಕೆ ಇರತಕ್ಕಂಥವರು, ಆಂತರಿಕ ಪ್ರಜಾತಂತ್ರದಲ್ಲಿ ನಂಬಿಕೆ ಇಟ್ಟುಕೊಂಡಿರತಕ್ಕಂಥ ಪಕ್ಷಗಳಲ್ಲಿ ಭಿನ್ನಾಭಿಪ್ರಾಯಗಳು ಇರತಕ್ಕಂಥಾದ್ದು ಸಹಜ. ಭಿನ್ನಾಭಿಪ್ರಾಯಗಳು ಗುಂಪುಗಳಲ್ಲ. ಆದ್ದರಿಂದ ಅವರು ಆ ರೀತಿಯ ಕಲ್ಪನೆಯನ್ನು ಮಾಡಿಕ್ಕೊಂಡರೆ ಅದನ್ನು ಅವರು ಖುಷಿಗೆ ಮಾಡಿಕೊಳ್ಳಬಹುದೇ ಹೊರತು ನಮ್ಮಲ್ಲಿ ಆ ತರಹದ್ದು ಯಾವುದೂ ಇಲ್ಲ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸಲಿಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಒಂದೇ ಒಂದು ಕ್ಲಾರಿಫಿಕೇಷನ್ ಏನೆಂದರೆ ಸರ್ಕಾರದವರು ಸೂಚನೆ ಕೊಟ್ಟಿದ್ದಾರೋ, ಅಥವಾ ಇಲ್ಲವೋ? ಇದರ ಬಗ್ಗೆ ನಾವು ಕೊಟ್ಟಿಲ್ಲ ಎನ್ನುವಂಥ ಮಾತನ್ನು ಸ್ಪಷ್ಟಪಡಿಸಿದರು. ಆದರೆ ಡಿ.ಸಿ. ಇಂಟಲಿಜೆನ್ಸ್ ಅಥವಾ ಚೀಫ್ ಸೆಕ್ರೆಟರಿಯಿಂದ ನೇರವಾಗಿ ಟೆಲಿಫೋನಿಕ್ ಆಕ್ಟ್ ಪ್ರಕಾರ ಪ್ರತಿ ಚೀಫ್ ಮಿನಿಸ್ಟರ್ ಬದಲಾವಣೆಯಾದಾಗ ತಮ್ಮ ಇನ್‌ಫಾರ್ಮೇಷನ್ ಗೋಸ್ಕರ ಒಂದೊಂದು ಲಿಸ್ಟ್ ಕೊಡುತ್ತಿರುತ್ತಾರೆ. ಅದನ್ನೇನಾದರೂ ಕೊಟ್ಟಿದ್ದಾರೆಯೇ, ಹೇಗೆ? ಇವರ ಇನ್‌ಸ್ಟ್ರಕ್ಷನ್ಸ್ ಮೇಲೆ ವಿರೋಧ ಪಕ್ಷಗಳ ನಾಯಕರ ಮೇಲೆ ಇರತಕ್ಕಂಥಾದ್ದು ನಾವು ಡಿಸ್‌ಟರ್ಬ್ ಮಾಡಿಲ್ಲ ಎಂದು ಹೇಳಿದರು. ಟೆಲಿಗ್ರಾಫಿಕ್ ಆಕ್ಟ್‌ನಲ್ಲಿ there is a provision to replace the list. ಅದನ್ನು ಮಾಡಿದ್ದಾರೋ, ಹೇಗೆ?

ಶ್ರೀ ಸಿದ್ಧರಾಮಯ್ಯ :- ಟೆಲಿಗ್ರಾಫಿಕ್ ಆಕ್ಟ್ ಪ್ರಕಾರ ಇಂಟೆಲಿಜೆನ್ಸ್‌ನವರು, ಯಾರು ಆ್ಯಂಟಿ ಸೋಷಿಯಲ್ ಎಲಿಮೆಂಟ್ಸ್, ಸರ್ಕಾರಕ್ಕೆ ಧಕ್ಕೆ ತರತಕ್ಕಂಥವರು ಇರುತ್ತಾರೆ, ಅವರ ಬಗ್ಗೆ ಮಾಡತಕ್ಕಂಥಾದ್ದು. ಸರ್ಕಾರವಾಗಲೀ, ಮುಖ್ಯ ಕಾರ್ಯದರ್ಶಿಯಾಗಲೀ ಅಥವಾ ಇನ್ನು ಯಾರೇ ಆಗಲೀ ಯಾವುದೇ ತರಹದ ಯಾರ ಹೆಸರನ್ನೂ ಕೂಡ ಕೊಟ್ಟಿಲ್ಲ.

ಶ್ರೀಮತಿ ಬಿ. ಟಿ. ಲಲಿತಾ ನಾಯಕ್ :- ಈ ದೇಶದಲ್ಲಿ ಎಷ್ಟೊಂದು ಜ್ವಲಂತವಾದ ಸಮಸ್ಯೆಗಳಿವೆ, ಕರ್ನಾಟಕ ರಾಜ್ಯದಲ್ಲಿ ದಿನಬೆಳಗಾದರೆ ಪತ್ರಿಕೆಯಲ್ಲಿ ಎಂಥೆಂಥ ಮಹತ್ವವಾದ ವಿಷಯಗಳು ಬರುತ್ತವೆ, ವಿರೋಧ ಪಕ್ಷದ ನಾಯಕರುಗಳು ಅದನ್ನೆಲ್ಲಾ ಪ್ರಸ್ತಾಪ ಮಾಡುವುದನ್ನು ಬಿಟ್ಟು ಇದು ಯಾವುದಕ್ಕೂ ಪ್ರಯೋಜನಕ್ಕೆ ಬರಲಾರದಂಥ ವೇಸ್ಟ್ ವಿಷಯವನ್ನು ಏಕೆ ಎತ್ತುತ್ತಾರೆ? ಆದರ ಬದಲು ಉತ್ತಮವಾದಂಥ ವಿಷಯವನ್ನು ಏಕೆ ಎತ್ತುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಯಾರಿಂದಲೂ ಬುದ್ಧಿ ಹೇಳಿಸಿಕೊಳ್ಳುವುದಕ್ಕೆ ನಾವು ಇಲ್ಲಿಗೆ ಬಂದಿಲ್ಲ. But this is a question of freedom of speech of everybody. ಇದೇ ಒಂದು ಇಷ್ಯೂ ಮೇಲೆ Sri Ramakrishna Hegde resigned. ಅದನ್ನು ಸುಮ್ಮನೆ ಲಘುವಾಗಿ ಎಂದರೆ ನಾವು ಏನಾದರೂ ಲಘುವಾಗಿರುವುದನ್ನು ಎತ್ತುವುದಕ್ಕೆ ಬಂದಿದ್ದೇವೆಯೇ? ಇರಬಹುದು. ಯಾವುದನ್ನು ಲಘುವಾಗಿ ಮಾತನಾಡಬೇಕು ಎನ್ನುವ ಅರಿವು ನಮಗೂ ಇದೆ.

ಅಧ್ಯಕ್ಷರು :- ಟೈಮ್ ವೇಸ್ಟ್ ಆಗುವುದು ಬೇಡ. ಖರ್ಗೆಯವರೆ ದಯಮಾಡಿ ಸಹಕರಿಸಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಏನಾದರೂ ತೆಗೆಯುವುದು ಎಂದರೆ ಏನು? ಇದು ಏನಾದರೂ ವಿಷಯವೇ? ಒಬ್ಬ ರಾಜ್ಯಸಭಾ ಸದಸ್ಯ, ನಿಮ್ಮ ಲೀಡರ್, ಯಾರ ಕಾಲಿಗೆ ಹೋಗಿ ಬೀಳುತ್ತಿದ್ದೀರಿ, ಯಾರ ಚಪ್ಪಲಿಯನ್ನು ತಲೆಯ ಮೇಲೆ ಇಟ್ಟುಕೊಂಡು ಓಡಾಡಿದಿರಿ, ಆ ರಾಜ್ಯಸಭಾ ಸದಸ್ಯರು ಇವತ್ತು ಹೇಳಿದರೆ, ಅದನ್ನು ಲಘುವಾಗಿ ಎಂದು ಹೇಳಿದರೆ ಹೇಗೆ?

ಶ್ರೀ ಸಿದ್ದರಾಮಯ್ಯ :- ನಮ್ಮ ಪಕ್ಷಕ್ಕೆ ಸಂಬಂಧಪಟ್ಟಂಥ ವಿಚಾರಗಳನ್ನು ನಾವೇ ಚರ್ಚೆ ಮಾಡಿಕೊಳ್ಳುತ್ತೇವೆ.

Sri. M. Mallikharjuna Kharge : Yes, I have got every right. ಒಬ್ಬ ರಾಜ್ಯಸಭಾ ಸದಸ್ಯರು ಇವತ್ತು ಹೇಳಿದ ಮೇಲೆ I have to raise it.

MR. SPEAKER : It is alright.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಇದು ಕೆಲಸಕ್ಕೆ ಬರಲಾರದ ವಿಷಯ ಎಂದೆ what does it mean ?... ಇದು ಕೆಲಸಕ್ಕೆ ಬರಲಾರದ್ದು ಎಂದರೆ ಏನು? ತಾವು ಕೆಲಸಕ್ಕೆ ಬರಲಾರದ ವಿಷಯವನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿರೋ?.

MR. SPEAKER : Alright, the matter is closed.

SRI. H. SHIVAPPA : Freedom of speech/expression is not absolute right. It is subjected to reasonable restriction. Freedom is not a licence. They are not absolute rights.

MR. SPEAKER : Mr. Nanje Gowda to raise.

(ಋ) ಸುಪ್ರೀಂ ಕೋರ್ಟಿನಿಂದ ನಮ್ಮ ಮತ್ತು ತಮಿಳುನಾಡು ಲಾಯರ್‌ಗಳಿಗೆ ಸಲಹೆ.

ಶ್ರೀ ಹೆಚ್ ಎನ್. ನಂಜೇಗೌಡ ಬಸವನಗುಡಿ :- ಸನ್ಮಾನ್ಯ ಅಧ್ಯಕ್ಷರೇ, ನಿನ್ನೆ ಸುಪ್ರೀಂ ಕೋರ್ಟ್‌ನವರು ನಮ್ಮ ಮತ್ತು ತಮಿಳುನಾಡು ಲಾಯರ್‌ಗಳಿಗೆ ಸಲಹೆ ಕೊಟ್ಟಿದ್ದಾರೆ, ಸೂಚನೆ ಕೊಟ್ಟಿದ್ದಾರೆ. ಇದು ಒಂದು ಪ್ರಮುಖವಾದ ಬೆಳವಣಿಗೆ. ಅಂದರೆ ಇದರ ಬಗ್ಗೆ ಚರ್ಚೆಯಾಗಬೇಕೆಂದು ನಾನು ಹೇಳುತ್ತಿಲ್ಲ. ಆ ಕೋರ್ಟ್ ಆದೇಶದಲ್ಲಿ ಇನ್ನೊಂದು ಏನು ಬರೆದಿದ್ದಾರೆಂದರೆ, ಇದು ಪತ್ರಿಕೆಯಲ್ಲಿ ಬಂದಿರತಕ್ಕಂಥದ್ದು,